# ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991.

## ಪ್ರಕರಣಗಳ ಕ್ರಮಪಟ್ಟಿ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

**ಅಧ್ಯಾಯ I**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು.

**ಅಧ್ಯಾಯ II**

3. ಮಂಡಲಿಯ ರಚನೆ.
4. ಪದಾವಧಿ ಮತ್ತು ಸೇವಾ ಷರತ್ತುಗಳು.
5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ.
6. ಸದಸ್ಯನನ್ನು ತೆಗೆದುಹಾಕುವುದು.
7. ಕಾರ್ಯದರ್ಶಿ.
8. ಮಂಡಲಿಯ ಸಭೆಗಳು.
9. ವ್ಯವಹರಣೆಗಳು ಸರಿಯಾದುವೆಂದು ಮತು ಊರ್ಜಿತವಾದುವೆಂದು ಪೂರ್ವ ಭಾವನೆ ಮಾಡುವುದು.
10. ಅನುಷ್ಠಾನ ಸಮಿತಿ.
11. ಅನುಷ್ಠಾನ ಸಮಿತಿಯ ಅಧಿಕಾರಗಳು.

**ಅಧ್ಯಾಯ III**

12. ಯೋಜನೆಯ ಸಿದ್ಧತೆ ಮತ್ತು ಸ್ಕೀಮುಗಳ ಅನುಮೋದನೆ.
13. ಉಸ್ತುವಾರಿ.
14. ಸಮನ್ವಯ.
15. ಯೋಜನೆಗಳ ಅನುಷ್ಠಾನ.
16. ಮಾಹಿತಿಯನ್ನು ಪಡೆಯುವುದು.
17. ಅಧಿಕಾರದ ಪ್ರತ್ಯಾಯೋಜನೆ.

**ಅಧ್ಯಾಯ IV**

18. ಮಂಡಲಿಯ ನಿಧಿ.
19. ನಿಧಿಯ ವಿನಿಯೋಗ.
2೦. ಯೋಜನೆಯಲ್ಲಿ ಹಂಚಿಕೆ.
20ಎ. ಮಂಡಲಿಗೆ ನಿರ್ದೇಶನ ನೀಡಲು ಸರ್ಕಾರದ ಅಧಿಕಾರ.
21. ರಾಜ್ಯಸರ್ಕಾರದಿಂದ ಅನುದಾನ.
22. ಸಾಲ ಪಡೆಯಲು ಅಧಿಕಾರ.
23. ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನೆ.

**ಅಧ್ಯಾಯ V**

24. ವರದಿ.
25. ಮಂಡಲಿಯ ಆಯವ್ಯಯ ಪತ್ರ.

26. ನಿಯಮಗಳ ರಚನಾಧಿಕಾರ.

27. ವಿನಿಯಮಗಳನ್ನು ರಚಿಸಲು ಮಂಡಲಿಗೆ ಅಧಿಕಾರ. ಅನುಸೂಚಿ.

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ.**

I

**1991ರ ಅಧಿನಿಯಮ 36** .- ಮಲೆನಾಡು ಪ್ರದೇಶವು ಅದರ ವಿಲಕ್ಷಣ ಪ್ರಾದೇಶಿಕ ಸ್ವರೂಪ, ಚದುರಿದ ಜನವಸತಿ, ಮೇಲ್ಮೈ ಲಕ್ಷಣ, ಭಾರೀ ಮಳೆ, ದಟ್ಟ ಕಾಡುಗಳು. ಅಸಂಖ್ಯ ಉಪನದಿಗಳು ಮುಂತಾದವುಗಳ ಕಾರಣದಿಂದಾಗಿ ಅಭಿವೃದ್ಧಿಯ ವಿಶಿಷ್ಟ ಸಮಸ್ಯೆಗಳನ್ನು ಎದುರಿಸುತ್ತಿದೆ.

ಈ ಪ್ರದೇಶವನ್ನು ರಾಜ್ಯದ ಇತರ ಭಾಗಗಳ ಮಟ್ಟಕ್ಕೆ ತರುವುದಕ್ಕಾಗಿ ಅಭಿವೃದ್ಧಿ ಕಾರ್ಯದ ಹಂತವನ್ನು ತ್ವರಿತಗೊಳಿಸಲು ಒಂದು ಸಮಗ್ರ ಶಾಸನವನ್ನು ಮಾಡುವುದು ಅವಶ್ಯಕವೆಂದು ಪರಿಗಣಿಸಲಾಯಿತು. ಅದು ಇತರ ವಿಷಯಗಳೊಂದಿಗೆ ಈ ಮುಂದಿನವುಗಳಿಗೂ ಉಪಬಂಧ ಕಲ್ಪಿಸುತ್ತದೆ.

(i) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿಯ ಸ್ಥಾಪನೆ;

(ii) ಒಂದು ಅನುಷ್ಠಾನ ಸಮಿತಿಯ ರಚನೆ;

(iii) ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಒಂದು ಯೋಜನೆಯನ್ನು ಸಿದ್ದಪಡಿಸಲು ಅಭಿವೃದ್ಧಿ ಸ್ಕೀಮುಗಳ ಅನುಷ್ಠಾನದ ಉಸ್ತುವಾರಿ ಮಾಡಲು ಮತ್ತು ಆ ಪ್ರದೇಶದಲ್ಲಿಯ ಅಭಿವೃದ್ಧಿ ಇಲಾಖೆಗಳು ಹಾಗೂ ಜಿಲ್ಲಾ ಪರಿಷತ್ತುಗಳ ಕಾರ್ಯ ನಿರ್ವಹಣೆಯನ್ನು ಸಮನ್ವಯಗೊಳಿಸಲು ಮಂಡಲಿಗೆ ಅಧಿಕಾರ ನೀಡುವುದು;

(iv) ಮಂಡಲಿಗಾಗಿ ರಾಜ್ಯ ಯೋಜನೆಯಲ್ಲಿ ಹಣಕಾಸು ಹಂಚಿಕೆಗೆ ಉಪಬಂಧ ಕಲ್ಪಿಸುವುದು;

ಕೆಲವು ಇತರ ಸಾಂದರ್ಭಿಕ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ವಿಧೇಯಕ.

(27-9-1991ರ ಕರ್ನಾಟಕ ರಾಜ್ಯಪತ್ರ (ವಿಶೇಷ ಪತ್ರಿಕೆ) ಭಾಗ IV-2A ರಲ್ಲಿ ನಂಬ್ರ 614ರಲ್ಲಿದ್ದಂತೆ)

**II**

**1993ರ ಅಧಿನಿಯಮ 18**.- ಈ ಮುಂದಿ ನವುಗಳಿಗೆ ಉಪಭಂಧ ಕಲ್ಪಿಸುವುದಕ್ಕಾಗಿ 1991ರ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಭಾವಿಸಲಾಗಿದೆ.-

(i) ಅಭಿವೃದ್ಧಿ ಕಮಿಷನರ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯ ಬದಲಾಗಿ ವಿಭಾಗೀಯ ಕಮೀಷನರ್ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯನ್ನು ಮಂಡಲಿಯ ಕಾರ್ಯದರ್ಶಿಯಾಗಿ ನೇಮಕ ಮಾಡುವುದು;

(ii) ರಾಜ್ಯ ಕೇಂದ್ರ ಸ್ಥಾನದಲ್ಲೂ ಸಹ ಮಂಡಲಿಯ ಸಭೆಗಳನ್ನು ನಡೆಸುವುದು;

(iii) ಯೋಜನೆಗಳನ್ನು ರೂಪಿಸಲು ಮತ್ತು ಇತರ ಆನುಷಂಗಿಕ ವಿಷಯಗಳಿಗಾಗಿ ಸರ್ಕಾರೇತರ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು;

(iv) ಸಾರ್ವಜನಿಕ ಹಿತದೃಷ್ಟಿಯಿಂದ ಈ ಅಧಿನಿಯಮದ ಹಾಗೂ ಇತರ ಆನುಷಂಗಿಕ ತಿದ್ದುಪಡಿಗಳನ್ನು ಕಾರ್ಯರೂಪಕ್ಕೆ ತರಲು ಅಗತ್ಯವಾದ ನಿರ್ದೇಶನಗಳನ್ನು ಮಂಡಲಿಗೆ ನೀಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವುದು;

(v) ಮಲೆನಾಡು ಪ್ರದೇಶ ಎಂಬ ಪರಿಭಾಷೆಯಲ್ಲಿ "ಚಾಮರಾಜನಗರವನ್ನು ಸೇರಿಸುವುದು.

ಆದುದರಿಂದ ಈ ವಿಧೇಯಕ.

(1993ರ ವಿಧಾನಸಭಾ ವಿಧೇಯಕ ಸಂಖ್ಯೆ 16 ರಲ್ಲಿದ್ದಂತೆ)

## III

**1994ರ ಅಧಿನಿಯಮ 34.–** 1991ರ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮದ ಅನುಸೂಚಿಯನ್ನು ತಿದ್ದುಪಡಿ ಮಾಡುವ ಮೂಲಕ "ಮಲೆನಾಡು ಪ್ರದೇಶ ಎಂಬ ಪದದ ಅರ್ಥದಲ್ಲಿ ಹೊನ್ನಾಳಿ ತಾಲ್ಲೂಕನ್ನು ಸೇರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1994ರ ವಿಧಾನ ಸಭಾ ವಿಧೇಯಕ ಸಂಖ್ಯೆ 7ರಲ್ಲಿದ್ದಂತೆ)

## IV

**2026ರ ತಿದ್ದುಪಡಿ ಅಧಿನಿಯಮ ಸಂಖ್ಯೆ: 9** ಮಂಡಲಿಯ ಸದರಿ ಪ್ರದೇಶದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಜಿಲ್ಲೆ ಅಥವಾ ತಾಲ್ಲೂಕನ್ನು ನೋಡಲ್ ಜಿಲ್ಲೆ ಅಥವಾ ತಾಲ್ಲೂಕಾಗಿ ಆಯ್ಕೆ ಮಾಡಿದ ಮತ್ತು ಮತದಾರರಾಗಿ ನೋದಾಯಿಸಲಾಗಿರುವ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಲು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 36)ಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 75, ಕಡತ ಸಂಖ್ಯೆ:ಸಂವ್ಯಶಾಇ 90 ಶಾಸನ 2025]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 32ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:23, ದಿನಾಂಕ:08.01.2026ರಲ್ಲಿ ಪ್ರಕಟಗೊಂಡಿದೆ]

* * * *

**1991ರ ಕರ್ನಾಟಕ ಅಧಿನಿಯಮ ಸಂಖ್ಯೆ 36**

(1991ರ ಡಿಸೆಂಬರ್ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ )

# ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991.

(1991ನೇ ಡಿಸೆಂಬರ್ 7ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ).

(1993ರ 18ನೇ, 1994ರ 34ನೇ ಮತ್ತು 2026ರ 09 ರ ಮೂಲಕ ತಿದ್ದುಪಡಿಯಾದಂತೆ)

ಮಲೆನಾಡು ಪ್ರದೇಶಕ್ಕಾಗಿ, ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಒಳಗೊಂಡ ವಾರ್ಷಿಕ ಯೋಜನೆಯನ್ನುಸಿದ್ಧಪಡಿಸುವ, ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿ ನೋಡಿಕೊಳ್ಳುವ ಮತ್ತು ಯೋಜನೆಯನ್ನುಅನುಷ್ಠಾನಕ್ಕೆ ತರುವುದರ ಮೇಲ್ವಿಚಾರಣೆ ನಡೆಸುವ ಮತ್ತು ಅದರ ಮೌಲ್ಯ ನಿರ್ಧರಿಸುವ ಒಂದು ಅಭಿವೃದ್ಧಿ ಮಂಡಲಿಯ ಸ್ಥಾಪನೆಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಮಲೆನಾಡುಪ್ರದೇಶಕ್ಕಾಗಿ, ಮಲೆನಾಡುಪ್ರದೇಶದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಒಳಗೊಂಡ ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ, ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾ ನದ ಉಸ್ತುವಾರಿ ನೋಡಿಕೊಳ್ಳುವ ಮತ್ತು ಯೋಜನೆಯನ್ನು ಅನುಷ್ಠಾನಕ್ಕೆ ತರುವುದರ ಮೇಲ್ವಿಚಾರಣೆ ನಡೆಸುವ ಮತ್ತು ಅದರ ಮೌಲ್ಯ ನಿರ್ಧರಿಸುವ ಒಂದು ಅಭಿವೃದ್ಧಿ ಮಂಡಲಿಯ ಸ್ಥಾಪನೆಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

## ಅಧ್ಯಾಯ I

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991 ಎಂದು ಕರೆಯತಕ್ಕದ್ದು.

(2) ಇದರ ವ್ಯಾಪ್ತಿಯು ಇಡೀ ಮಲೆನಾಡು ಪ್ರದೇಶಕ್ಕೆ ಇರತಕ್ಕದ್ದು.

(3) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆ ಮೂಲಕ ದಿ:1೦.3.1992ರಂದು ಜಾರಿಗೆ ಬಂದಿದೆ.

2. **ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) 'ಮಂಡಲಿ' ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ;

(ಬಿ) 'ಅಧ್ಯಕ್ಷ' ಎಂದರೆ, ಮಂಡಲಿಯ ಅಧ್ಯಕ್ಷ;

(ಸಿ) 'ಅಭಿವೃದ್ಧಿ ಇಲಾಖೆ' ಎಂದರೆ, ಪೊಲೀಸ್ ಮತ್ತು ನ್ಯಾಯಿಕ ಇಲಾಖೆಗಳನ್ನು ಹೊರತುಪಡಿಸಿ, ಮಲೆನಾಡು ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ, ರಾಜ್ಯ ಸರ್ಕಾರದಿಂದ ಅಥವಾ ಇತರ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ನಿಕಾಯ ಅಥವಾ ನಿಗಮವೂ ಸೇರಿದಂತೆ ಆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳು;

(ಡಿ) 'ಅನುಷ್ಠಾನ ಸಮಿತಿ' ಎಂದರೆ, 10ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಅನುಷ್ಠಾನ ಸಮಿತಿ;

(ಇ) 'ಮಲೆನಾಡು ಪ್ರದೇಶ' ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶಗಳು;

(ಎಫ್) 'ಸದಸ್ಯ' ಎಂದರೆ, ಮಂಡಲಿಯ ಸದಸ್ಯ;

(ಜಿ) 'ಯೋಜನೆ' ಎಂದರೆ, ಜಿಲ್ಲಾ ಪರಿಷತ್ತುಗಳ ಜಿಲ್ಲಾ ಯೋಜನೆಯನ್ನು ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಯನ್ನು ಹೊರತುಪಡಿಸಿ, ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಮಂಡಲಿಯು ಸಿದ್ಧಪಡಿಸಿದ ವಾರ್ಷಿಕ ಯೋಜನೆ;

(ಎಚ್) 'ಕಾರ್ಯದರ್ಶಿ' ಎಂದರೆ, ಮಂಡಲಿಯ ಕಾರ್ಯದರ್ಶಿ.

**3. ಮಂಡಲಿಯ ರಚನೆ.**- (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಸಾಧ್ಯವಾದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಶಿವಮೊಗ್ಗದಲ್ಲಿ ಕೇಂದ್ರ ಕಚೇರಿ ಇರುವ 'ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ' ಎಂದು ಕರೆಯಲಾಗುವ ಒಂದು ಮಂಡಲಿಯನ್ನು ಮಲೆನಾಡು ಪ್ರದೇಶಕ್ಕಾಗಿ ಸ್ಥಾಪಿಸತಕ್ಕದ್ದು.

(2) ಮಂಡಲಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ಮಂಡಲಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಮಲೆನಾಡು ಪ್ರದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿಧಿಸುವ, ಮಂಡಲಿಯ ಅಧಿಕಾರ ವ್ಯಾಪ್ತಿಯೊಳಗೆ ತಮ್ಮ ಚುನಾವಣಾ ಕ್ಷೇತ್ರಗಳನ್ನು ಹೊಂದಿರುವ ಸಂಸತ್ತಿನ ಮತ್ತು ರಾಜ್ಯ ವಿಧಾನಮಂಡಲದ ಸದಸ್ಯರು;

[1][(ಎ-ಎ) ಮಲೆನಾಡು ಪ್ರದೇಶದ ಅಧಿಕಾರ ವ್ಯಾಪ್ತಿಯೊಳಗಿನ ಜಿಲ್ಲೆ ಅಥವಾ ತಾಲ್ಲೂಕನ್ನು ನೋಡಲ್ ಜಿಲ್ಲೆ ಅಥವಾ ತಾಲ್ಲೂಕನ್ನಾಗಿ ಆಯ್ಕೆ ಮಾಡಿದ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು;][1]

(1) 2026ರ ಅಧಿನಿಯಮ 09ರ ಮೂಲಕ ದಿ:08.01.2026 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಮಲೆನಾಡು ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪರಿಷತ್ತುಗಳ ಅಧ್ಯಕ್ಷರು;

(ಸಿ) ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಹತ್ತು ಮಂದಿಯನ್ನು ಮೀರದ ಸದಸ್ಯರು, ಅವರ ಪೈಕಿ ಇಬ್ಬರು ಅನುಸೂಚಿತ ಜಾತಿಗಳು ಮತ್ತು ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಾಗಿರತಕ್ಕದ್ದು;

(ಡಿ) ಮಂಡಲಿಯ ಕಾರ್ಯದರ್ಶಿ; ಮತ್ತು

(ಇ) ಮಲೆನಾಡು ಪ್ರದೇಶದಲ್ಲಿರುವ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮಿಷನರು;

(4)ರಾಜ್ಯ ಸರ್ಕಾರವು, ಸದಸ್ಯರ ಪೈಕಿ ಒಬ್ಬರನ್ನು ಮಂಡಲಿಯ ಅಧ್ಯಕ್ಷರನ್ನಾಗಿ ನೇಮಿಸತಕ್ಕದ್ದು;

(5)ರಾಜ್ಯ ಸರ್ಕಾರವು, [1][ವಿಭಾಗೀಯ ಕಮೀಶನರ][1] ದರ್ಜೆಗೆ ಕೆಳಗಿನದಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಮಂಡಲಿಯ ಕಾರ್ಯದರ್ಶಿಯನ್ನಾಗಿ ಸಹ ನೇಮಿಸತಕ್ಕದ್ದು;

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಪ್ರತಿಸ್ಥಾಪಿಸಲಾಗಿದೆ.

(6) ರಾಜ್ಯ ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಅವಶ್ಯಕವೆಂದು ತಾನು ಪರಿಗಣಿಸುವ ಅಂಥ ಇತರ ಅಧಿಕಾರಿಗಳು ಮತ್ತು ಉದ್ಯೋಗಿಗಳನ್ನು ಮಂಡಲಿಗೆ ಒದಗಿಸತಕ್ಕದ್ದು;

(7) ಮಂಡಲಿಯ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಸಂದಾಯವಾಗಬೇಕಾದ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿವೇತನಗಳೂ ಸೇರಿದಂತೆ ಮಂಡಲಿಯ ಆಡಳಿತಾತ್ಮಕ ವೆಚ್ಚಗಳನ್ನು ಮಂಡಲಿಯ ನಿಧಿಯ ಪೈಕಿಯಿಂದ ಭರಿಸತಕ್ಕದ್ದು.

**4. ಪದಾವಧಿ ಮತ್ತು ಸೇವಾ ಷರತ್ತುಗಳು.**-(1) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು, ರಾಜ್ಯ ಸರ್ಕಾರದಿಂದ ನೇಮಿತರಾದ ಅಧ್ಯಕ್ಷರು ಮತ್ತು ಇತರ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಅಧ್ಯಕ್ಷರು ಅಥವಾ ಪದನಿಮಿತ್ತ ಸದಸ್ಯನಲ್ಲದ ಒಬ್ಬ ಸದಸ್ಯನು, ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು. ಆದರೆ ತನ್ನ ರಾಜೀನಾಮೆಯು ಅಂಗೀಕಾರವಾಗುವವರೆಗೆ ಹುದ್ದೆಯಲ್ಲಿ ಮುಂದುವರೆಯತಕ್ಕದ್ದು.

(3) ಅಧ್ಯಕ್ಷರು ಮತ್ತು ಇತರ ಸದಸ್ಯರು, ನಿಯಮಿಸಬಹುದಾದ ಅಂಥ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು.

(4) ಅಧ್ಯಕ್ಷರು ಮತ್ತು ಇತರ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ಮಂಡಲಿಯ ನಿಧಿಯಿಂದ ಭರಿಸತಕ್ಕದ್ದು.

(5) ಮಂಡಲಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯು, ಮಂಡಲಿಯಲ್ಲಿ ಯಾವುದೇ ರಿಕ್ತ ಸ್ಥಾನವು ಇರುವುದೆಂಬ ಅಥವಾ ಮಂಡಲಿಯ ರಚನೆಯಲ್ಲಿ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

**5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ.**- (1) ಒಬ್ಬ ವ್ಯಕ್ತಿಯು, ಅವನು,-

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ದೋಷಸಿದ್ಧಿಯಾಗಿದ್ದು, ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದು, ಹಾಗೆಂದು ಒಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅನನ್ಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲಾದವನಾಗಿದ್ದರೆ ಅಥವಾ ವಜಾ ಆದವನಾಗಿದ್ದರೆ; ಅಥವಾ

(ಇ) ಮಂಡಲಿಯ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಮಂಡಲಿಯೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ಅವನು ಅಥವಾ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ;

(ಎಫ್) ಮಂಡಲಿಯ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಮಂಡಲಿಯ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

-ಸದಸ್ಯನಾಗಿ ನೇಮಿತನಾಗುವುದಕ್ಕೆ ಮತ್ತು ಸದಸ್ಯನಾಗಿರುವುದಕ್ಕೆ ಅನರ್ಹನಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು ಮಂಡಲಿಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಾಹೀರಾತನ್ನು ಸೇರಿಸಲಾದ ಯಾವುದೇ ವೃತ್ತಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣಮಾತ್ರದಿಂದಲೇ (1)ನೇ ಉಪ-ಪ್ರಕರಣದ (ಇ) ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

6. **ಸದಸ್ಯನನ್ನು ತೆಗೆದುಹಾಕುವುದು.**- ಸರ್ಕಾರವು, ಅಧ್ಯಕ್ಷ ಅಥವಾ ಇತರ ಸದಸ್ಯನನ್ನು, ಅವನು,-

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಯಾವುವೇ ಅನರ್ಹತೆಗಳಿಗೆ ಒಳಪಟ್ಟರೆ:

ಪರಂತು, ಅಧ್ಯಕ್ಷ ಅಥವಾ ಸದಸ್ಯನನ್ನು, ಅವನು ಆ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ, ಆ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ತೆಗೆದುಹಾಕತಕ್ಕದ್ದಲ್ಲ; ಅಥವಾ

(ಬಿ) ಅವನು ಕಾರ್ಯವನ್ನು ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಗೈರು ಹಾಜರಾಗಲು ಮಂಡಲಿಯಿಂದ ಅನುಮತಿ ಪಡೆಯದೆ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ಅವನನ್ನು ಆ ಪದದಲ್ಲಿ ಮುಂದುವರಿಸಿದರೆ, ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವಂತೆ ತನ್ನ ಸ್ಥಾನವನ್ನು ಅವನು ದುರುಪಯೋಗ ಪಡಿಸಿಕೊಳ್ಳುವನೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ:

ಪರಂತು, ಯಾವೊಬ್ಬ ಸದಸ್ಯನನ್ನು, ಅವನಿಗೆ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು ಈ ಖಂಡದ ಅಡಿಯಲ್ಲಿ ತೆಗೆದುಹಾಕತಕ್ಕದ್ದಲ್ಲ,

-ತೆಗೆದುಹಾಕತಕ್ಕದ್ದು.

**7. ಕಾರ್ಯದರ್ಶಿ.-** (1) ಕಾರ್ಯದರ್ಶಿಯು, ರಾಜ್ಯ ಸರ್ಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದ ಅಂಥ ವೇತನ ಮತ್ತು ಇತರ ಭತ್ಯೆಗಳನ್ನು ಪಡೆಯತಕ್ಕದ್ದು.

(2) ರಾಜ್ಯ ಸರ್ಕಾರವು, ಕಾರ್ಯದರ್ಶಿಗೆ ಆಗಿಂದಾಗ್ಗೆ, ಗೈರುಹಾಜರಿಗೆ ಅನುಮತಿ ನೀಡಬಹುದು.

(3) ಕಾರ್ಯದರ್ಶಿಯು, ಮಂಡಲಿಯ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು, ಮತ್ತು,-

(ಎ) ಮಂಡಲಿಯಿಂದ ಅನುಮೋದಿತವಾದ ಯೋಜನೆಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರನಾಗಿರತಕ್ಕದ್ದು;

(ಬಿ) ಮಂಡಲಿಯ ನಿಧಿಯನ್ನು ನಿರ್ವಹಿಸತಕ್ಕದ್ದು;

(ಸಿ) ಮಂಡಲಿಯ ಲೆಕ್ಕಪತ್ರಗಳನ್ನು ಇಡುವಂತೆ ಮಾಡತಕ್ಕದ್ದು; ಮತ್ತು

(ಡಿ) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅವನಿಗೆ ಪ್ರದಾನ ಮಾಡಲಾಗುವ ಇತರ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**8. ಮಂಡಲಿಯ ಸಭೆಗಳು.-** [1][(1) ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು, ಕಾರ್ಯದರ್ಶಿಯು ಮಂಡಲಿಯ ಸಭೆಯನ್ನು ಕರೆಯತಕ್ಕದ್ದು ಮತ್ತು ಸಭೆಯನ್ನು ಮಂಡಲಿಯ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳದಲ್ಲಿ ಅಥವಾ ರಾಜ್ಯ ಕೇಂದ್ರ ಸ್ಥಾನದಲ್ಲಿ ನಡೆಸತಕ್ಕದ್ದು.][1]

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಪ್ರತಿಸ್ಥಾಪಿಸಲಾಗಿದೆ.

(2)ಮಂಡಲಿಯು ಕಡೇಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3)ಅಧ್ಯಕ್ಷರು, ತಾವು ಅವಶ್ಯವೆಂದು ಭಾವಿಸಿದರೆ, ವಿಶೇಷ ಸಭೆಯನ್ನು ಕರೆಯಬಹುದು [1][ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯದರ್ಶಿಯು ಅಂಥ ಸಭೆಯನ್ನು ಕರೆಯಬಹುದು ಮತ್ತು ಮಂಡಲಿಯ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳದಲ್ಲಿ ಅಥವಾ ರಾಜ್ಯ ಕೇಂದ್ರ ಸ್ಥಾನದಲ್ಲಿ ಸಭೆಯನ್ನು ನಡೆಸತಕ್ಕದ್ದು.][1]

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಸೇರಿಸಲಾಗಿದೆ.

(4) ಮಂಡಲಿಯು, ತನ್ನ ಸಭೆಗಳಲ್ಲಿ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(5) ಪ್ರತಿಯೊಂದು ಸಭೆಯಲ್ಲಿಯೂ, ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ ಯಾವುದೇ ಸಭೆಗೆ ಹಾಜರಾಗಲು ಅಧ್ಯಕ್ಷರು ಅಸಮರ್ಥರಾದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡುವ ಯಾವೊಬ್ಬ ಇತರ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(6) ಇಪ್ಪತ್ತು ಮಂದಿ ಸದಸ್ಯರಿಂದ ಗಣಪೂರ್ತಿಯಾಗತಕ್ಕದ್ದು.

9. **ವ್ಯವಹರಣೆಗಳು ಸರಿಯಾದುವೆಂದು ಮತ್ತು ಊರ್ಜಿತವಾದುವೆಂದು ಪೂರ್ವಭಾವನೆ ಮಾಡುವುದು.**- ಅಧ್ಯಕ್ಷರಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ವ್ಯಕ್ತಿಯ ಅನರ್ಹತೆ ಅಥವಾ ನೇಮಕಾತಿಯಲ್ಲಿನ ಲೋಪವು, ಮಂಡಲಿಯ ಅಂಥ ಕೃತ್ಯ ಅಥವಾ ವ್ಯವಹರಣೆಯು, ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿದ್ದರೆ, ಮಂಡಲಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯನ್ನು ದೂಷಿತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

10. **ಅನುಷ್ಠಾನ ಸಮಿತಿ.**- ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಅನುಷ್ಠಾನ ಸಮಿತಿಯಿರತಕ್ಕದ್ದು, ಎಂದರೆ:-

(ಎ) ಮಂಡಲಿಯ ಕಾರ್ಯದರ್ಶಿ, ಅವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ವಿಭಾಗೀಯ ಕಮಿಷನರು; ಬೆಂಗಳೂರು, ಬೆಳಗಾಂ ಮತ್ತು ಮೈಸೂರು ವಿಭಾಗಗಳು;

(ಸಿ) ಮಲೆನಾಡು ಪ್ರದೇಶದಲ್ಲಿರುವ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮೀಷನರು;

(ಡಿ) ಮಲೆನಾಡು ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳು;

(ಇ) ಮಲೆನಾಡು ಪ್ರದೇಶದಲ್ಲಿನ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ನೀರು ಪೂರೈಕೆ ಪ್ರದೇಶಕ್ಕಾಗಿ ರಚಿಸಲಾದ ನೀರು ಪೂರೈಕೆ ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ಆಡಳಿತಗಾರ;

(ಎಫ್) ಕೃಷಿ ಇಲಾಖೆಯ ನಿರ್ದೇಶಕರು;

(ಜಿ) ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು;

(ಎಚ್) ಪಶುಸಂಗೋಪನೆ ಇಲಾಖೆಯ ನಿರ್ದೇಶಕರು;

(ಐ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ನಿರ್ದೇಶಕರು;

(ಜೆ) ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು;

(ಕೆ) ಮಲೆನಾಡು ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಚೀಫ್ ಇಂಜಿನಿಯರುಗಳು;

(ಎಲ್) ಸಾರ್ವಜನಿಕ ಶಿಕ್ಷಣ ಇಲಾಖೆಯ ಕಮಿಷನರು;

(ಎಂ) ಮಲೆನಾಡು ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿ;

(ಎನ್) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ, 1976ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ, ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತನಾದ ಕುಲಪತಿ;

(ಒ) ರಾಜ್ಯ ಸರ್ಕಾರದಿಂದ ನೇಮಿಸಲಾದ ಅಂಥ ಇತರ ಅಧಿಕಾರಿಗಳು.

11. **ಅನುಷ್ಠಾನ ಸಮಿತಿಯ ಅಧಿಕಾರಗಳು.**- (1) ಅನುಷ್ಠಾನ ಸಮಿತಿಯು, ಮಂಡಲಿಯಿಂದ ತನಗೆ ಪ್ರತ್ಯಾಯೋಜಿಸಲಾದ ಮಂಡಲಿಯ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಅನುಷ್ಠಾನ ಸಮಿತಿಯು, ಕಡೇ ಪಕ್ಷ ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಅನುಷ್ಠಾನ ಸಮಿತಿಯು, ತಮ್ಮ ಸಭೆಗಳಲ್ಲಿನ ಕಾರ್ಯಕಲಾಪಗಳ ಸಂಬಂಧದಲ್ಲಿ, ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ III

**12. ಯೋಜನೆಯ ಸಿದ್ಧತೆ ಮತ್ತು ಸ್ಕೀಮುಗಳ ಅನುಮೋದನೆ.-** (1) ಮಂಡಲಿಯು, ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಪ್ರತಿವರ್ಷವೂ ಒಂದು ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ರಾಜ್ಯ ಸರ್ಕಾರವು ಯೋಜನೆಯನ್ನು ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟು ಇಲ್ಲದೆಯೇ ಅನುಮೋದಿಸಬಹುದು.

(2) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಮಲೆನಾಡು ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿವೃದ್ಧಿ ಇಲಾಖೆಗಳು [1][, ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳು][1] ಯೋಜನೆಗನುಸಾರವಾಗಿ ರೂಪಿಸಿದ ಸ್ಕೀಮುಗಳನ್ನು ಮಂಡಲಿಯು ಅನುಮೋದಿಸತಕ್ಕದ್ದು.

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಪ್ರತಿಸ್ಥಾಪಿಸಲಾಗಿದೆ.

**13. ಉಸ್ತುವಾರಿ.-** ಮಂಡಲಿಯಿಂದ ಅನುಮೋದಿತವಾದ ವಾರ್ಷಿಕ ಯೋಜನೆಗೆ ಸಂಬಂಧಪಟ್ಟಂತೆ ಮಲೆನಾಡು ಪ್ರದೇಶದಲ್ಲಿ [1][ಕಾರ್ಯನಿರ್ವಹಿಸುತ್ತಿರುವ ವಿವಿಧ ಅಭಿವೃದ್ಧಿ ಇಲಾಖೆಗಳ, ಜಿಲ್ಲಾ ಪರಿಷತ್ತುಗಳ ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳ][1] ವಾರ್ಷಿಕ ಯೋಜನೆಗಳು ಮತ್ತು ಅವುಗಳ ನೆರವೇರಿಕೆಯ ಸಲುವಾಗಿ ಭರಿಸಲಾದ ವೆಚ್ಚದ ಪ್ರಗತಿಯ ಉಸ್ತುವಾರಿ ಮತ್ತು ಪುನರವಲೋಕನೆಯ ಅಧಿಕಾರ ಮಂಡಲಿಗೆ ಇರತಕ್ಕದ್ದು.

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಪ್ರತಿಸ್ಥಾಪಿಸಲಾಗಿದೆ.

14. **ಸಮನ್ವಯ.-** ಮಂಡಲಿಯು, ಮಲೆನಾಡು ಪ್ರದೇಶದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಎಲ್ಲ ಅಭಿವೃದ್ಧಿ ಇಲಾಖೆಗಳು [1][ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳು][1] ಕಾರ್ಯನಿರ್ವಹಣೆಯನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಅಂಥ ಅಭಿವೃದ್ಧಿ ಇಲಾಖೆಗಳು [1][ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳ][1] ಸಿಬ್ಬಂದಿ ಸ್ಥಿತಿಯನ್ನೂ ಸಹ ಪುನರ್ಅವಲೋಕಿಸತಕ್ಕದ್ದು ಮತ್ತು ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆಗಳನ್ನು ನೀಡಬಹುದು.

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಪ್ರತಿಸ್ಥಾಪಿಸಲಾಗಿದೆ.

**15. ಯೋಜನೆಗಳ ಅನುಷ್ಠಾನ.-** ಮಲೆನಾಡು ಪ್ರದೇಶದೊಳಗೆ ಕಾರ್ಯ ನಿರ್ವಹಿಸುತ್ತಿರುವ ಅಭಿವೃದ್ಧಿ ಇಲಾಖೆಗಳು, [1][ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳ][1] ಮೂಲಕ ವಾರ್ಷಿಕ ಯೋಜನೆ ಮತ್ತು ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಲಾದ ಯೋಜನೆಗಳ ಅನುಷ್ಠಾನಕ್ಕೆ ಮಂಡಲಿಯು ಹೊಣೆಯಾಗಿರತಕ್ಕದ್ದು. ಯಾವುದೇ ಕಾರಣಕ್ಕಾಗಿ ಒಂದು ಅಭಿವೃದ್ಧಿ ಇಲಾಖೆಯು ಯೋಜನೆಯ ಅಡಿಯಲ್ಲಿ ತನಗೆ ಹಂಚಿಕೆ ಮಾಡಲಾದ ಮೊಬಲಗಿನ ಪೈಕಿಯಿಂದ ಪೂರ್ಣವೆಚ್ಚವನ್ನು ಭರಿಸುವ ಸಂಭವವಿಲ್ಲದಿದ್ದರೆ ಮಂಡಲಿಯು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ನಿಧಿಗಳ ಪುನರ್ವಿನಿಯೋಗವನ್ನು ಮಾಡಬಹುದು.

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಪ್ರತಿಸ್ಥಾಪಿಸಲಾಗಿದೆ.

**16. ಮಾಹಿತಿಯನ್ನು ಪಡೆಯುವುದು.-** ಮಂಡಲಿಯು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಮಲೆನಾಡು ಪ್ರದೇಶದಲ್ಲಿಯ ಯಾವುವೇ ಜಿಲ್ಲಾ ಪರಿಷತ್ತುಗಳಿಂದ ಅಥವಾ ಮಲೆನಾಡು ಪ್ರದೇಶದಲ್ಲಿಯ ಯಾವುದೇ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯಿಂದ ಮಾಹಿತಿಯನ್ನು ಕೋರಿ ಪಡೆಯಬಹುದು ಮತ್ತು ಮಂಡಲಿಯು ಕೋರಿದ ಮಾಹಿತಿಯನ್ನು ಒದಗಿಸಲು ಅಂಥ ಜಿಲ್ಲಾ ಪರಿಷತ್ತು ಅಥವಾ ಅಧಿಕಾರಿಯು ಬದ್ಧರಾಗಿರತಕ್ಕದ್ದು.

**17. ಅಧಿಕಾರದ ಪ್ರತ್ಯಾಯೋಜನೆ.-** ಮಂಡಲಿಯು, 27ನೇ ಪ್ರಕರಣದ ಅಡಿಯಲ್ಲಿ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರದತ್ತವಾದ ಯಾವುವೇ

ಅಧಿಕಾರಗಳನ್ನು ಅಧಿಸೂಚನೆಯ ಮೂಲಕ, [1][ಅನುಷ್ಠಾನ ಸಮಿತಿ ಅಥವಾ ಮಂಡಲಿಯ ಕಾರ್ಯದರ್ಶಿಗೆ][1] ಪ್ರತ್ಯಾಯೋಜಿಸಬಹುದು.

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಪ್ರತಿಸ್ಥಾಪಿಸಲಾಗಿದೆ.

## ಅಧ್ಯಾಯ IV

**18. ಮಂಡಲಿಯ ನಿಧಿ.**- (1) 'ಮಂಡಲಿಯ ನಿಧಿ' ಎಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕದ್ದು.

(2) ಈ ಮುಂದಿನವುಗಳು ಮಂಡಲಿಯ ನಿಧಿಯ ಭಾಗವಾಗತಕ್ಕದ್ದು ಅಥವಾ ಅದಕ್ಕೆ ಸಂದಾಯವಾಗತಕ್ಕದ್ದು:-

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮಿತವಾಗಿರುವ ಅಥವಾ ಇಲ್ಲದಿರುವ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಧನ ಸಹಾಯಗಳು, ದೇಣಿಗೆಗಳು ಮತ್ತು ದಾನಗಳು;

(ii) ಮಂಡಲಿಯು ಸಾಲವಾಗಿ ಪಡೆದ ಮೊಬಲಗು;

(iii) ಯಾವುದೇ ಮೂಲದಿಂದಾಗಲಿ ಮಂಡಲಿಯಿಂದ ಅಥವಾ ಮಂಡಲಿಯ ಪರವಾಗಿ ಸ್ವೀಕರಿಸಲಾದ ಎಲ್ಲ ಇತರ ಮೊತ್ತಗಳು.

(3) ರಾಜ್ಯ ಸರ್ಕಾರದಿಂದ ಅನ್ಯಥಾ ನಿರ್ದೇಶಿತವಾಗಿದ್ದ ಹೊರತು, ನಿಧಿಗೆ ಜಮೆಯಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ತೊಡಗಿಸತಕ್ಕದ್ದು.

**19. ನಿಧಿಯ ವಿನಿಯೋಗ.**- ಮಂಡಲಿಯ ನಿಧಿ ಮತ್ತು ಮಂಡಲಿಯು ಹೊಂದಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತನ್ನು ಈ ಅಧಿನಿಯಮದ ನೆರವೇರಿಕೆಗಾಗಿ ವಿನಿಯೋಗಿಸತಕ್ಕದ್ದು.

**20. ಯೋಜನೆಯಲ್ಲಿ ಹಂಚಿಕೆ.**- ರಾಜ್ಯ ಸರ್ಕಾರವು ಮಂಡಲಿಯ ಯೋಜನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ರಾಜ್ಯದ ವಾರ್ಷಿಕ ಯೋಜನೆಯಲ್ಲಿ ಮಂಡಲಿಗೆ ಹಣಕಾಸು ಹಂಚಿಕೆಯನ್ನು ಮಾಡತಕ್ಕದ್ದು.

[1][**20ಎ. ಮಂಡಲಿಗೆ ನಿರ್ದೇಶನ ನೀಡಲು ಸರ್ಕಾರದ ಅಧಿಕಾರ.**- ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು,ಅಗತ್ಯವಿರುವಂಥ ನಿರ್ದೇಶನಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಹೊರಡಿಸುವ ಮೂಲಕ ಮಂಡಲಿಗೆ ನೀಡುವುದು ಸಾರ್ವಜನಿಕ ಹಿತಾಸಕ್ತಿಯಿಂದ ಯುಕ್ತವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಲ್ಲಿ ಅದು ಹಾಗೆ ನಿರ್ದೇಶನ ನೀಡಬಹುದು. ಅಂತಹ ನಿರ್ದೇಶನಗಳನ್ನು ಪಾಲಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.][1]

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಸೇರಿಸಲಾಗಿದೆ.

**21. ರಾಜ್ಯ ಸರ್ಕಾರದಿಂದ ಅನುದಾನ.**- ರಾಜ್ಯ ಸರ್ಕಾರವು ಪ್ರತಿ ವರ್ಷ ಮಂಡಲಿಗೆ, ಮಂಡಲಿಯ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊತ್ತದ ಅನುದಾನವನ್ನು ನೀಡತಕ್ಕದ್ದು.

**22. ಸಾಲ ಪಡೆಯಲು ಅಧಿಕಾರ.**- ಮಂಡಲಿಯು ಆಗಿಂದಾಗ್ಗೆ, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಂದ ಮತ್ತು ಈ ಬಗ್ಗೆ ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗೆ ಅಗತ್ಯವಾದ ಯಾವುದೇ ಮೊತ್ತವನ್ನು ಸಾಲವಾಗಿ ಪಡೆಯಬಹುದು.

**23. ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನೆ.-** (1) ಮಂಡಲಿಯ ನಿಧಿಯ ವರಮಾನದ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಮಂಡಲಿಯು, ನಿಯಮಿಸಬಹುದಾದ ಅಂಥ ಪ್ರಪತ್ರದಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ಸಿದ್ಧಪಡಿಸತಕ್ಕದ್ದು.

(3) ಮಂಡಲಿಯ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ರಾಜ್ಯ ಸರ್ಕಾರವು ನೇಮಿಸಬಹುದಾದ ಅಂಥ ಲೆಕ್ಕಪರಿಶೋಧಕನು ಮಾಡತಕ್ಕದ್ದು.

(4) ಲೆಕ್ಕ ಪರಿಶೋಧಕನಿಗೆ ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಮಂಡಲಿಯ ಎಲ್ಲ ಲೆಕ್ಕಪತ್ರಗಳು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶವಿರತಕ್ಕದ್ದು.

(5) ಮಂಡಲಿಯು, ಲೆಕ್ಕಪರಿಶೋಧನೆಗೆ ನಿಯಮಿಸಬಹುದಾದ ಅಂಥ ಚಾರ್ಜುಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(6) ಮಂಡಲಿಯು, ಲೆಕ್ಕಪರಿಶೋಧಕನಿಂದ ವರದಿಯನ್ನು ಸ್ವೀಕರಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ಲೆಕ್ಕಪತ್ರಗಳ ವಾರ್ಷಿಕ ವಿವರಣೆಯ ಒಂದು ಪ್ರತಿಯನ್ನು ಲೆಕ್ಕ ಪರಿಶೋಧಕನ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣೆಯು ಪ್ರಕಟವಾಗುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕನ ವರದಿಯನ್ನು ಪರಿಶೀಲಿಸಿದ ತರುವಾಯ, ಮಂಡಲಿಗೆ ತಾನು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಮಂಡಲಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ V

**24. ವರದಿ.-** ಮಂಡಲಿಯು ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮುಂಚೆ ಅಂಥ ಪ್ರಪತ್ರದಲ್ಲಿ ಮತ್ತು ಅಂಥ ಅಂತರದಲ್ಲಿ ರಾಜ್ಯ ಸರ್ಕಾರಕ್ಕೆ ನಿಯಮಿಸಲಾದ ವರದಿಯನ್ನು ಸಲ್ಲಿಸತಕ್ಕದ್ದು.

**25. ಮಂಡಲಿಯ ಆಯವ್ಯಯ ಪತ್ರ.-** ಮಂಡಲಿಯು ಪ್ರತಿ ವರ್ಷ ಮುಂಬರುವ ಏಪ್ರಿಲ್ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ವರಮಾನ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ಅಂಥ ದಿನಾಂಕಕ್ಕೆ ಮುಂಚೆ ಮತ್ತು ಅಂಥ ಪ್ರಪತ್ರದಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**26. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಲಾದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು, ರಚಿಸಬಾರದೆಂದು ತೀರ್ಮಾನಿಸಿದರೆ, ನಿಯಮವು ತದನಂತರ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**27. ವಿನಿಯಮಗಳನ್ನು ರಚಿಸಲು ಮಂಡಲಿಗೆ ಅಧಿಕಾರ.-** ಮಂಡಲಿಯು ಈ ಅಧಿನಿಯಮದ ಉಪಬಂಧಗಳು ಮತ್ತು 26ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಂದ, ಈ ಅಧಿನಿಯಮದ ಉದ್ದೇಶಗಳ ನೆರವೇರಿಕೆಗಾಗಿ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

**ಅನುಸೂಚಿ**

**(2 (ಇ) ಪ್ರಕರಣವನ್ನು ನೋಡಿ)**

| ಕ್ರಮ ಸಂಖ್ಯೆ | ಜಿಲ್ಲೆಗಳು | ತಾಲ್ಲೂಕುಗಳು |
|---|---|---|
| 1 | 2 | 3 |
| 1 | ಬೆಳಗಾಂ | ಖಾನಾಪುರ, ಹುಕ್ಕೇರಿ, ಬೆಳಗಾಂ, ಬೈಲಹೊಂಗಲ, ಸವದತ್ತಿ. |
| 2 | ಚಿಕ್ಕಮಗಳೂರು | ಕೊಪ್ಪ, ಮೂಡಿಗೆರೆ, ಶೃಂಗೇರಿ, ಚಿಕ್ಕಮಗಳೂರು, ನರಸಿಂಹರಾಜಪುರ, ತರೀಕೆರೆ, [1][ಕಡೂರು][1] |

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಸೇರಿಸಲಾಗಿದೆ.

| | | |
|---|---|---|
| 3 | ಕೊಡಗು | ಮಡಿಕೇರಿ, ಸೋಮವಾರಪೇಟೆ, ವೀರಾಜಪೇಟೆ. |
| 4 | ಹಾಸನ | ಸಕಲೇಶಪುರ, ಆಲೂರು, ಬೇಲೂರು, ಹಾಸನ, ಅರಕಲಗೂಡು. |
| 5 | ಮೈಸೂರು | ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ,ಪಿರಿಯಾಪಟ್ಟಣ, ಹುಣಸೂರು, ಕೊಳ್ಳೇಗಾಲ, [1][ಚಾಮರಾಜನಗರ ][1] |

1. 1993ರ ಅಧಿನಿಯಮ ಸಂಖ್ಯೆ 18ರ ಮೂಲಕ ದಿ:18.5.1993ರಿಂದ ಸೇರಿಸಲಾಗಿದೆ.

| | | |
|---|---|---|
| 6 | ಉತ್ತರ ಕನ್ನಡ | ಅಂಕೋಲ, ಭಟ್ಕಳ, ಹೊನ್ನಾವರ, ಕುಮಟಾ, ಕಾರವಾರ, ಸಿದ್ಧಾಪುರ, ಸಿರಸಿ, ಸೂಪ, ಯಲ್ಲಾಪುರ, ಹಳಿಯಾಳ, ಮುಂಡಗೋಡ. |
| 7 | ದಕ್ಷಿಣ ಕನ್ನಡ | ಬೆಳ್ತಂಗಡಿ, ಕುಂದಾಪುರ, ಕಾರ್ಕಳ, ಪುತ್ತೂರು, ಸುಳ್ಯ, ಉಡುಪಿ, ಮಂಗಳೂರು, ಬಂಟ್ವಾಳ. |
| 8 | ಶಿವಮೊಗ್ಗ | ಹೊಸನಗರ, ತೀರ್ಥಹಳ್ಳಿ, ಸಾಗರ, ಶಿವಮೊಗ್ಗ, ಶಿಕಾರಿಪುರ, ಸೊರಬ, ಚನ್ನಗಿರಿ, ಭದ್ರಾವತಿ, [1][ಹೊನ್ನಾಳಿ][1]. |

1. 1994ರ ಅಧಿನಿಯಮ ಸಂಖ್ಯೆ 34ರ ಮೂಲಕ ದಿ:3.10.1994ರಿಂದ ಸೇರಿಸಲಾಗಿದೆ.

| | | |
|---|---|---|
| 9 | ಧಾರವಾಡ | ಧಾರವಾಡ, ಕಲಘಟಗಿ, ಶಿಗ್ಗಾವಿ, ಸವಣೂರು, ಹಾನಗಲ್, ಬ್ಯಾಡಗಿ, ಹಿರೇಕೆರೂರು. |

*****

**ಅಧಿಸೂಚನೆ**

**ಬೆಂಗಳೂರು 10ನೇ ಮಾರ್ಚ್ 1992 (ಸಂಖ್ಯೆ: ಪಿ ಡಿ 37 ಡಿಪಿಪಿ 62)**

ಎಸ್.ಓ.352.- ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 36) ರ1ನೇ ಪ್ರಕರಣದ (3)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು,1992ನೇ ಮಾರ್ಚ್ 10ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಹೆಚ್.ಟಿ. ಕಾಳಯ್ಯ,
ಸರ್ಕಾರದ ಅಧೀನಕಾರ್ಯದರ್ಶಿ,
ಯೋಜನಾ ಇಲಾಖೆ.

(ಕರ್ನಾಟಕ ರಾಜ್ಯಪತ್ರದ ಭಾಗ 4-2ಸಿ(ii) ವಿಶೇಷ ಪತ್ರಿಕೆ ಸಂಖ್ಯೆ 136 ದಿನಾಂಕ 11-3-1992ರಲಿ ಪ್ರಕಟಿತ.)

**2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 09**

(2026ರ ಜನವರಿ ತಿಂಗಳ 8ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ಅಧಿನಿಯಮ, 2025**

(2026ರ ಜನವರಿ ತಿಂಗಳ 7ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 36)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.-** ಮಲೆನಾಡು ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 36)ರ 3ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದ ತರುವಾಯ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎ-ಎ) ಮಲೆನಾಡು ಪ್ರದೇಶದ ಅಧಿಕಾರ ವ್ಯಾಪ್ತಿಯೊಳಗಿನ ಜಿಲ್ಲೆ ಅಥವಾ ತಾಲ್ಲೂಕನ್ನು ನೋಡಲ್ ಜಿಲ್ಲೆ ಅಥವಾ ತಾಲ್ಲೂಕನ್ನಾಗಿ ಆಯ್ಕೆ ಮಾಡಿದ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು;"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.